# ಗಂಗಾವತಿ ತಾಲೂಕಿನ ಜಲವೀರರ ವೀರಗಲ್ಲುಗಳು.

**ಸಿದ್ದೇಶ ಬಿ. ಪಿ.**
ಸಂಶೋಧನಾರ್ಥಿ
ಚರಿತ್ರೆ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ.

Article Link: https://aksharasurya.com/2023/08/siddesha-b-p-2/

**ABSTRACT:**

ವೀರಪೂಜೆಯ ಪರಂಪರೆ ಪ್ರಾಚೀನ ಕಾಲದಿಂದಲೂ ಮುಂದುವರಿದುಕೊಂಡು ಬಂದಿದೆ. ಯುದ್ಧ, ತುರುಗಾಳಗ, ಬೇಟೆ, ದರೋಡೆಕೋರರಿಂದ ಗ್ರಾಮಗಳ ರಕ್ಷಣೆ, ಕಳ್ಳರೊಡನೆ ಹೋರಾಡಿ ಮಡಿದವರ, ನೀರಿನಲ್ಲಿ ಬಿದ್ದವರ ರಕ್ಷಣೆ ಮುಂತಾದ ಸಂದರ್ಭದಲ್ಲಿ ಮಡಿದ ವೀರರ ನೆನಪಿಗಾಗಿ ವೀರಗಲ್ಲುಗಳನ್ನು ಹಾಕಿಸುವ ಪರಂಪರೆ ಪ್ರಾಚೀನಕಾಲದಿಂದಲೂ ಬೆಳೆದು ಬಂದಿದೆ. ಅದರಲ್ಲಿ ಕೆರೆ, ಹೊಂಡ, ನದಿ, ಸಮುದ್ರದ ನೀರಿನಲ್ಲಿ ರಕ್ಷಣೆ ಮಾಡುವ ಸಂದರ್ಭದಲ್ಲಿ ಮಡಿದವರ ಜಲವೀರರ ವೀರಗಲ್ಲುಗಳು ದೊರಕುವುದು ಬಹಳ ವಿರಳ. ಅಂತದರಲ್ಲಿ ತುಂಗಭದ್ರಾ ನದಿ ಎಡದಂಡೆಯ ಮೇಲಿರುವ ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲೂಕಿನಲ್ಲಿ ಮೂರು ಜಲವೀರರ(ಅಂಬಿಗರ) ವೀರಗಲ್ಲುಗಳು ಕಂಡುಬರುತ್ತವೆ. ಅವುಗಳನ್ನು ವಿಶ್ಲೇಷಿಸುವ ಪ್ರಯತ್ನ ಈ ಲೇಖನದಲ್ಲಿ ಮಾಡಲಾಗಿದೆ.

**KEYWORDS:** ಸಂಸ್ಕೃತಿ, ವೀರಪೂಜೆ, ವೀರಗಲ್ಲು, ಪರಂಪರೆ, ಪರಾಕ್ರಮ, ಸ್ವರ್ಗ, ಕೈಲಾಸ, ಹರಿಗೋಲು, ಜಲ, ಹುಟ್ಟು, ಅಂಬಿಗ, ತುಂಗಭದ್ರಾ, ನದಿ, ಸಂಸ್ಥಾನ, ಐತಿಹ್ಯ, ಹೇರೂರು, ಆನೆಗೊಂದಿ, ಕೆರೆ, ಈಜುಗಾರ.

ಭಾರತೀಯ ಸಂಸ್ಕೃತಿಯಲ್ಲಿ ವೀರಪೂಜೆಯನ್ನು ಪ್ರಾಚೀನಕಾಲದಿಂದಲೂ ಮುಂದುವರಿಸಿಕೊಂಡು ಬಂದಿದ್ದಾರೆ. ಇದರಿಂದ ವೀರಗಲ್ಲುಗಳ ಪರಂಪರೆ ಆರಂಭಗೊಂಡಿತು. ಗ್ರಾಮೀಣ ಜನರ ಲೋಕದೃಷ್ಠಿಯಲ್ಲಿ ವೀರಗಲ್ಲುಗಳು ಪರಮಪೂಜ್ಯವಾಗಿವೆ. ಜನಚರಿತ್ರೆಯನ್ನು ಬರೆಯುವಾಗ ಶಾಸನಗಳಂತೆ ವೀರಗಲ್ಲುಗಳು ಪ್ರಮುಖ ಆಕಾರಗಳಾಗಿವೆ. ಕನ್ನಡ ನಾಡಿನಲ್ಲಿ ಇಲ್ಲಿಯವರೆಗೆ ದೊರಕಿರುವ ವೀರಗಲ್ಲುಗಳಲ್ಲಿ ಲಿಪಿಸಹಿತ ಮತ್ತು ಲಿಪಿರಹಿತ ಎರಡು ಪ್ರಕಾರದ ವೀರಗಲ್ಲುಗಳು ಕಂಡುಬಂದಿವೆ. ಅದರಲ್ಲಿ ಲಿಪಿರಹಿತ ವೀರಗಲ್ಲುಗಳ ಸಂಖ್ಯೆ ಹೆಚ್ಚಾಗಿ ಕಂಡುಬರುತ್ತವೆ. ಇವೆಲ್ಲಾ ಮೌಖಿಕ ಆಕರಗಳಂತೆ ನಿಂತಿವೆಯಷ್ಟೆ. ಇವುಗಳ ಹಿಂದಣ ಇರುವ ಚರಿತ್ರೆಯನ್ನು ಜನರು ಹೇಳುವ ಐತಿಹ್ಯದ ಸ್ವರೂಪವನ್ನು ಬಿಚ್ಚಿದರೆ

ಲಿಪಿರಹಿತ ವೀರಗಲ್ಲುಗಳ ಚರಿತ್ರೆ ಒಡಮೂಡುತ್ತದೆ.

ನಾಡಿನ ಅನೇಕ ಊರುಗಳಲ್ಲಿ ಅನಾಥವಾಗಿ ಬಿದ್ದ ಏಕಾಂಗಿ ವೀರರ ವೀರಗಲ್ಲುಗಳು ಇನ್ನೂ ಚರಿತ್ರೆಯ ಪುಟದಲ್ಲಿ ದಾಖಲಾಗದೆ ಕಣ್ಮರೆಯಾಗಿವೆ. ರಾಜಪರಿವಾರದ, ಅಧಿಕಾರ ಪರಿವಾರದವರ ವೀರಗಲ್ಲುಗಳಿಗೆ ಮಾನ್ಯತೆ ದೊರಕಿಸಿದ್ದಾರೆ. ಆದರೆ ಅದರಾಚೆ ಬಹುದೊಡ್ಡ ವೀರರ ಲೋಕವಿದೆ. ಈ ವೀರರು ಪ್ರಭುತ್ವ ನೇಮಿಸಿದವರಲ್ಲ, ಉಂಬಳಿ, ಸಂಬಳ ಪಡೆದವರಲ್ಲ. ಊರಿನ ಆತ್ಮಗೌರವವನ್ನು ಕಾಪಾಡಿ ತಮ್ಮ ಸಾಮಾಜಿಕ ಹೊಣೆಗಾರಿಕೆಯನ್ನು ನಿರ್ವಹಿಸಿದವರು. ಸ್ವಯಂ ಜನರಕ್ಷಣೆ, ಗ್ರಾಮ ರಕ್ಷಣೆಯ ನೈತಿಕ ಹೊಣೆಗಾರಿಕೆ ನಿಭಾಯಿಸಿದ ವೀರರ ಸ್ಮರಣಾರ್ಥಕವಾಗಿ ನಿಲ್ಲಿಸಿದ ಕಲ್ಲುಗಳನ್ನು ವೀರಗಲ್ಲುಗಳು ಎಂದು ಕರೆಯಲಾಗುತ್ತದೆ.

ವೀರನು ಯಾವ ಹೋರಾಟದ ಸಂದರ್ಭದಲ್ಲಿ ಮರಣ ಹೊಂದಿದನು ಎಂಬುದರ ಆಧಾರದ ಮೇಲೆ ವೀರನನ್ನು ಚಿತ್ರಿಸಿರುವುದು ಕಂಡುಬರುತ್ತದೆ. ತುರುಗಾಳಗದಲ್ಲಿ ಹಸುನೀಗಿದರೆ ಕುದುರೆಗಳ ಮೇಲೆ ಯುದ್ಧ ಮಾಡುವಂತೆ ವೀರನನ್ನು ಚಿತ್ರಿಸಿರುವುದು, ನೌಕಾ ಯುದ್ಧದಲ್ಲಿ ಮರಣ ಹೊಂದಿದ್ದರೆ ದೋಣಿ, ನೌಕೆಗಳ ಚಿತ್ರಣ, ಯುದ್ಧ ಸಂದರ್ಭದಲ್ಲಿ ಮರಣ ಹೊಂದಿದರೆ ಕತ್ತಿ, ರಕ್ಷಣಾ ತ್ರಾಣಗಳನ್ನು ಧರಿಸಿ ಯುದ್ಧ ಮಾಡುತ್ತಿರುವ ಚಿತ್ರಣ, ಭೇಟೆಗಾಗಿ ತೆರಳಿದ ಸಂದರ್ಭದಲ್ಲಿ ಮರಣ ಹೊಂದಿದ್ದರೆ ಪ್ರಾಣಿಗಳೊಂದಿಗೆ ಕಾದಾಡುತ್ತಿರುವ ಚಿತ್ರಣ, ನೀರಲ್ಲಿ ರಕ್ಷಣಾ ಸಂದರ್ಭದಲ್ಲಿ ಮರಣ ಹೊಂದಿದರೆ ಹುಟ್ಟು ಹಿಡಿದಿರುವ ಚಿತ್ರಣ ಹೀಗೆ ವೀರನು ಯಾವ ಯಾವ ಹೋರಾಟದ ಸಂದರ್ಭದಲ್ಲಿ ಮರಣ ಹೊಂದಿದನು ಎಂಬುದನ್ನು ವೀರಗಲ್ಲುಗಳಲ್ಲಿ ಚಿತ್ರಿಸಿರುವುದು ಕಂಡುಬರುತ್ತದೆ. ಕಲ್ಲಿನ ಮೊದಲಿನ ಪಟ್ಟಿಕೆಯಲ್ಲಿ ವೀರ ಹೋರಾಡುವ ಚಿತ್ರ, ಎರಡನೇ ಪಟ್ಟಿಕೆಯಲ್ಲಿ ವೀರನನ್ನು ಅಪ್ಸರೆಯರು ದೇವಲೋಕಕ್ಕೆ ಕೊಂಡೊಯ್ಯುತ್ತಿರುವ ಚಿತ್ರ, ಮೂರನೇ ಪಟ್ಟಿಕೆಯಲ್ಲಿ ಸ್ವರ್ಗಸ್ಥ ಮುಕ್ತಿ ಪಡೆದ ದೃಶ್ಯ ಕೆತ್ತಲಾಗಿದೆ. ವೀರನ ಪರಾಕ್ರಮವನ್ನು ಮೆಚ್ಚಿ ಅವನ ಪರಾಕ್ರಮ ಜಗತ್ತಿಗೆ ತಿಳಿಯಲೆಂದು ವೀರಗಲ್ಲನ್ನು ನಿಲ್ಲಿಸುವುದು ನಮ್ಮ ಕರ್ತವ್ಯವೆಂದು ಭಾವಿಸಿ, ಹಾಗೆ ವೀರಗಲ್ಲು ನಿಲ್ಲಿಸುವುದರ ಮೂಲಕ ಅವನಿಗೆ ಕೈಲಾಸ, ಸ್ವರ್ಗ, ವೈಕುಂಠವೋ ಪ್ರಾಪ್ತವಾಗುತ್ತದೆ ಎಂಬ ನಂಬಿಕೆ, ವೀರಗಲ್ಲು ನಿಲ್ಲಿಸುವಲ್ಲಿ ಲೌಕಿಕ ಮತ್ತು ಪಾರಮಾರ್ಥಿಕ ದೃಷ್ಟಿಗಳೆರಡು ಇತ್ತೆಂದು ತೋರುತ್ತದೆ. ವೀರಗಲ್ಲುಗಳು ರಾಜರ ಕಾಲದ ವೀರರ ಪರಾಕ್ರಮದ ಸಂಕೇತವಾಗಿ ಇಂದು ನಮಗೆ ಗೋಚರಿಸುತ್ತವೆ. ವಿಜಯನಗರ ಸಾಮ್ರಾಜ್ಯದ ಕಾಲದ ನಂತರ

ವೀರಗಲ್ಲುಗಳು ಹೆಚ್ಚು ಜನಪ್ರಿಯವಾಗತೊಡಗಿದವು. ಈ ಎಲ್ಲಾ ವೀರಗಲ್ಲುಗಳಲ್ಲಿ ನೀರಿನಲ್ಲಿ ಬಿದ್ದವರನ್ನು, ಜಲ ಪ್ರವಾಹದಲ್ಲಿ ಸಿಲುಕಿದವರನ್ನು ರಕ್ಷಿಸುವ ಸಂದರ್ಭದಲ್ಲಿ ನೀರಿನಲ್ಲಿ ಮಡಿದವರ ಸ್ಮರಣಾರ್ಥ ನಿಲ್ಲಿಸಿದ ವೀರಗಲ್ಲುಗಳು ಬಹಳ ವಿರಳ. ಅಂತಹ ವೀರಗಲ್ಲುಗಳು ತುಂಗಭದ್ರಾ ನದಿ ಎಡದಂಡೆಯ ಮೇಲಿರುವ ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲೂಕಿನ ವಿಜಯನಗರ ಸಾಮ್ರಾಜ್ಯದ ಮೊದಲ ರಾಜಧಾನಿ ಆನೆಗೊಂದಿಯಲ್ಲಿ ಎರಡು ವೀರಗಲ್ಲುಗಳು, ಹೇರೂರು ಗ್ರಾಮದಲ್ಲಿ ಒಂದು ವೀರಗಲ್ಲು ಕಂಡುಬರುತ್ತದೆ.

ವೀರ ಎಂಬ ಪದಕ್ಕೆ ಸಮಾನಾರ್ಥಕ ಪದವಾಗಿ ಇಂಗ್ಲೀಷ್ ಭಾಷೆಯ Hero ಎಂಬ ಪದವನ್ನೂ, ಇಂಗ್ಲೀಷ್ ಭಾಷೆಯ Hero ಎಂಬ ಪದಕ್ಕೆ ಸಮಾನಾರ್ಥಕವಾಗಿ ವೀರ ಎಂಬ ಪದವನ್ನು ಬಳಸುವುದು ರೂಢಿಯಲ್ಲಿದೆ. ಇದು ಮೂಲತಃ ಗ್ರೀಕ್ ಭಾಷೆಯಿಂದ ಇಂಗ್ಲೀಷ್ ಭಾಷೆಗೆ ಬಂದ ಪದ. ಇದು ಕಾಲದಿಂದ ಕಾಲಕ್ಕೆ ಹೆಚ್ಚು ಅರ್ಥ ವ್ಯಾಪ್ತಿಯನ್ನು ಪಡೆಯುತ್ತಾ ಬಂದಿರುವುದನ್ನು ಗಮನಿಸಬಹುದು.[1]

**ಆನೆಗೊಂದಿಯ ಅಂಬಿಗರ ವೀರಗಲ್ಲುಗಳು:**

ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲೂಕಿನ ಆನೆಗೊಂದಿ ಚಾರಿತ್ರಿಕ ಪಟ್ಟಣವಾಗಿದ್ದು, ಇದು ತುಂಗಭದ್ರಾ ನದಿಯ ಎಡ ದಂಡೆಯ ಮೇಲೆ ಕಂಡುಬರುತ್ತದೆ. ಇದು ವಿಜಯನಗರ ಸಾಮ್ರಾಜ್ಯದ ಮೊದಲ ರಾಜಧಾನಿ ಕೇಂದ್ರವಾಗಿತ್ತು. ಇಲ್ಲಿ ಅಂಬಿಗರ ಎರಡು ವೀರಗಲ್ಲುಗಳು ಕಂಡುಬರುತ್ತವೆ. ಒಂದೊಂದು ವೀರಗಲ್ಲಿನಲ್ಲಿ ಇಬ್ಬರು ವೀರರು ತಮ್ಮ ಕೈಯಲ್ಲಿ ಹುಟ್ಟನ್ನು ಹಿಡಿದಿದ್ದಾರೆ. ಆ ಹುಟ್ಟುಗಳ ಆಧಾರದ ಮೇಲೆ ಇವು ಅಂಬಿಗರ ವೀರಗಲ್ಲುಗಳು ಎಂದು ತಿಳಿಯಲು ನೆರವಾಗುತ್ತವೆ. ಎರಡು ವೀರಗಲ್ಲುಗಳನ್ನು ಆನೆಗೊಂದಿ ಕೋಟೆಯ ದಕ್ಷಿಣ ಹೆಬ್ಬಾಗಿಲಿನ ಪ್ರವೇಶದ್ವಾರದಲ್ಲಿ ಹಾಕಲಾಗಿತ್ತು. ಕಾಲಾಂತರದಲ್ಲಿ ನದಿಯ ಪ್ರವಾಹ ಹಾಗೂ ಇವುಗಳ ರಕ್ಷಣೆ ಇಲ್ಲದೆ ನೆಲಕ್ಕೆ ಬಿದ್ದು ಹೋಗಿರಬೇಕು. ಆದ್ದರಿಂದ ಈ ಎರಡು ವೀರಗಲ್ಲುಗಳಲ್ಲಿ ಒಂದನ್ನು ಆನೆಗೊಂದಿ ಕೋಟೆಯ ದಕ್ಷಿಣದ ಹೆಬ್ಬಾಗಿಲಿನಲ್ಲಿ, ಮತ್ತೊಂದು ಹುಚ್ಚಪ್ಪಯ್ಯನ ಮಠದಲ್ಲಿ ನಿಲ್ಲಿಸಲಾಗಿದೆ.

ಆನೆಗೊಂದಿ ಕೋಟೆಯ ದಕ್ಷಿಣ ಹೆಬ್ಬಾಗಿಲಿನ ಹೊರ ಭಾಗದ ಎಡಗಡೆಗೆ ಕೋಟೆಯ ಗೋಡೆಗೆ ದಕ್ಷಿಣಾಭಿಮುಖವಾಗಿ ನಿಲ್ಲಿಸಲಾಗಿದೆ. ಇದು ತಳವಾರಘಟ್ಟದಿಂದ ತುಂಗಭದ್ರಾ ನದಿಯನ್ನು ದಾಟಿ ಆನೆಗೊಂದಿಯ ಒಳಗಡೆ ಪ್ರವೇಶಿಸುವಾಗ ಪ್ರವೇಶದ್ವಾರದ ಬಲಭಾಗದಲ್ಲಿ ಇದೆ. ಈ ವೀರಗಲ್ಲಿನಲ್ಲಿ ಇಬ್ಬರು

ವೀರರನ್ನು ಚಿತ್ರಿಸಲಾಗಿದೆ. ಬಲ ಭಾಗದಲ್ಲಿರುವ ವೀರನು ನೀರಿನಲ್ಲಿ ಹರಿಗೋಲು ನಡೆಸಲು ನೆರವಾಗುವ ಹುಟ್ಟನ್ನು ತನ್ನ ಬಲ ಗೈಯಲ್ಲಿಡಿದು ಮೇಲಕೆತ್ತಿರುವನು, ತನ್ನ ಎಡ ಗೈಯನ್ನು ತನ್ನ ಎದೆಭಾಗಕ್ಕೆ ಸಮನಾಂತರವಾಗಿ ಹಿಟ್ಟುಕೊಂಡಿರುವನು. ತನ್ನ ಎಡಗಾಲನ್ನು ಒಂದು ಹೆಜ್ಜೆ ಮುಂದಕ್ಕೆ ಇಟ್ಟು ತನ್ನ ಕಾಲನ್ನು ಸ್ವಲ್ಪ ಬಾಗಿದ ಹಾಗೆ ಇರುವ ಭಂಗಿಯಲ್ಲಿ ನಿಂತಿರುವನು. ಈ ವೀರಗಲ್ಲಿನ ಎಡಭಾಗದಲ್ಲಿರುವ ವೀರನು ಹುಟ್ಟನ್ನು ತನ್ನ ಎಡಗೈಯಲ್ಲಿ ಹುಟ್ಟಿನ ತುದಿಯನ್ನು ಕೆಳಮುಖವಾಗಿ ಹಿಡಿದಿರುವನು. ತನ್ನ ಬಲಗೈಯನ್ನು ಮೇಲಕ್ಕೆ ಎತ್ತಿ ತನ್ನ ಎಲ್ಲಾ ಬೆರಳುಗಳನ್ನು ಜೋಡಿಸಿರುವನು (ನಿಲ್ಲು ಎನ್ನುವ ಸಂದೇಶದ ರೀತಿಯಲ್ಲಿದೆ). ತನ್ನ ಬಲಗಾಲನ್ನು ಮುಂದಕ್ಕೆ ಒಂದು ಹೆಜ್ಜೆ ಹಿಟ್ಟು ಕಾಲನ್ನು ಸ್ವಲ್ಪ ಬಾಗಿದ ರೀತಿಯಲ್ಲಿರುವ ಭಂಗಿಯಲ್ಲಿ ನಿಂತಿರುವನು. ಇಬ್ಬರು ವೀರರು ತಲೆಗೆ ರುಮಾಲನ್ನು, ಸೊಂಟಕ್ಕೆ ಪಂಜೆಯನ್ನು ಧರಿಸಿರುವರು. ಹೀಗೆ ಇಬ್ಬರು ವೀರರ ಚಿತ್ರಣವನ್ನು ಈ ವೀರಗಲ್ಲಿನಲ್ಲಿ ಚಿತ್ರಿಸಲಾಗಿದೆ. (ಚಿತ್ರ ಒಂದು)

ಆನೆಗೊಂದಿಯಲ್ಲಿರುವ ಅಂಬಿಗರ ಎರಡನೆಯ ವೀರಗಲ್ಲು ತಳವಾರಘಟ್ಟದಿಂದ ತುಂಗಭದ್ರಾ ನದಿ ದಾಟಿ ಆನೆಗೊಂದಿ ಒಳಗೆ ಪ್ರವೇಶಿಸಿದ ನಂತರ ಬಲಭಾಗದಲ್ಲಿರುವ ಹುಚ್ಚಪ್ಪಯ್ಯನ ಮಠದ ಪ್ರವೇಶ ದ್ವಾರದಿಂದ ಒಳಗೆ ಪ್ರವೇಶಿಸಿದಾಗ ಎದುರಿಗೆ ಅಂದರೆ ಮಠದ ಪಶ್ಚಿಮ ಭಾಗದಲ್ಲಿ ಪಶ್ಚಿಮಾಭಿಮುಖವಾಗಿ ನಿಲ್ಲಿಸಲಾಗಿದೆ. ಈ ವೀರಗಲ್ಲನ್ನು ಯಾವಾಗ? ಏಕೆ? ಹುಚ್ಚಪಯ್ಯನ ಮಠದಲ್ಲಿ ತಂದು ನಿಲ್ಲಿಸಿದರು ಎಂದು ತಿಳಿದು ಬಂದಿಲ್ಲ. ಆದರೆ ಈ ವೀರಗಲ್ಲು ತುಂಗಭದ್ರಾ ನದಿ ಪ್ರವಾಹದಿಂದ ನೆಲಕ್ಕೆ ಬಿದ್ದಿರಬೇಕು ಹಾಗಾಗಿ ರಕ್ಷಣೆಯ ದೃಷ್ಠಿಯಿಂದ ಈ ವೀರಗಲ್ಲನ್ನು ಹುಚ್ಚಪಯ್ಯನ ಮಠದಲ್ಲಿ ತಂದು ನಿಲ್ಲಿಸಿರುವ ಸಾಧ್ಯತೆ ಇದೆ. ಈ ವೀರಗಲ್ಲಿನಲ್ಲಿ ಇಬ್ಬರು ವೀರರು ಹರಿಗೋಲನ್ನು ನಡೆಸಲು ನೆರವಾಗುವ ಹುಟ್ಟನ್ನು ತಮ್ಮ ಕೈಯಲ್ಲಿ ಹಿಡಿದಿರುವ ಚಿತ್ರಣವನ್ನು ಕೆತ್ತಲಾಗಿದೆ. ಈ ವೀರಗಲ್ಲಿನ ಬಲಭಾಗದಲ್ಲಿ ನಿಂತಿರುವ ವೀರನು ತನ್ನ ಬಲ ಗೈಯಲ್ಲಿ ಹುಟ್ಟನ್ನು ಕೆಳಮುಖವಾಗಿ ಹಿಡಿದುಕೊಂಡು ತನ್ನ ಸೊಂಟಕ್ಕೆ ತಾಗುವಂತೆ ಹಿಡಿದಿದ್ದು, ತನ್ನ ಎಡಗೈಯನ್ನು ಮೇಲೆತ್ತಿರುವನು. ಎಡಭಾಗದಲ್ಲಿರುವ ವೀರನು ಹುಟ್ಟನ್ನು ತನ್ನ ಎಡಗೈಯಲ್ಲಿ ಹಿಡಿದು ಅದನ್ನು ತನ್ನ ಎಡ ಭುಜದ ಮೇಲೆ ಇಟ್ಟುಕೊಂಡಿದ್ದು ತನ್ನ ಬಲಗೈಯನ್ನು ಕೆಳಗೆ ಇಳಿಬಿಟ್ಟಿದ್ದಾನೆ. ಇಬ್ಬರು ವೀರರು ತಲೆಗೆ ರುಮಾಲು, ಪಂಜೆಯನ್ನು ಧ–ರಿಸಿರುವ ಚಿತ್ರಣವನ್ನು ಈ ವೀರಗಲ್ಲಿನಲ್ಲಿ ಚಿತ್ರಿಸಿರುವುದು ಕಂಡುಬರುತ್ತದೆ. (ಚಿತ್ರ ಎರಡು)

ಈ ಎರಡು ವೀರಗಲ್ಲಿನಲ್ಲಿ ಎರಡೆರೆಡು ವೀರರು ಇರುವುದು ಕಂಡುಬರುತ್ತದೆ. ಆದರೆ ಇಬ್ಬರು ವೀರರು ಒಂದೇ ಭಂಗಿಯಲ್ಲಿ ಇರುವ ದೃಶ್ಯ ಕಂಡುಬರುವುದಿಲ್ಲ. ಇಲ್ಲಿ ಒಂದು ಹರಿಗೋಲನ್ನು ಇಬ್ಬರು ಅಂಬಿಗರು ನಡೆಸುತ್ತಿರಬೇಕು. ಒಬ್ಬ–ರಿಗೊಬ್ಬರು ಹರಿಗೋಲು ನಡೆಸುವಾಗ ಸೂಚನೆಗಳನ್ನು ನೀಡುವ ರೀತಿಯಲ್ಲಿ ಈ ವೀರಗಲ್ಲುಗಳಲ್ಲಿನ ವೀರರನ್ನು ಚಿತ್ರಿಸಲಾಗಿದೆ. ತುಂಗಭದ್ರಾ ನದಿಯಲ್ಲಿ ಜನರನ್ನು ಒಂದು ದಡದಿಂದ ಮತ್ತೊಂದು ದಡಕ್ಕೆ ಹರಿಗೋಲಿನಲ್ಲಿ ಸಾಗಿಸುವ ಸಂದರ್ಭದಲ್ಲಿ ತಮ್ಮ ಸಾಹಸವನ್ನು ತೋರಿಸಿ, ನೀರಿನಲ್ಲಿ ಮಡಿದಿರಬಹುದಾದ ವೀರರ ವೀರಗಲ್ಲುಗಳು ಎಂದು ಆರ್ ಶೇಷಶಾಸ್ತ್ರೀ ಅವರು ಹೇಳಿದ್ದಾರೆ.[2] ಇಂದಿಗೂ ಅಂಬಿಗರು ವಿಶೇಷ ಸಂದರ್ಭಗಳಲ್ಲಿ ಈ ವೀರಗಲ್ಲುಗಳನ್ನು ಆರಾಧಿಸುತ್ತಾರೆ ಮತ್ತು ಅವುಗಳನ್ನು ಮೀನುಗಾರರ ವೀರಗಾರರು ಎಂದು ಕರೆಯುತ್ತಾರೆ.[3] ಈ ವೀರಗಲ್ಲಿನ ಮೇಲೆ ಶಾಸನ ಚಿತ್ರಿಸಲಾಗಿಲ್ಲ ಆದ್ದರಿಂದ ಈ ವೀರಗಲ್ಲಿನಲ್ಲಿರುವ ಜಲವೀರರ ಬಗ್ಗೆ ಖಚಿತ ಮಾಹಿತಿ ತಿಳಿದುಬರುವುದಿಲ್ಲ.

ನವವೃಂದಾವನದ ಆಚೆಯ ಆವರಣದಲ್ಲಿ ಇರುವ ದೇವಾಲಯಕ್ಕೆ ಸಂಬಂಧಿಸಿದ ದುರಂತ ಕಥೆಯೊಂದು ಹೀಗಿದೆ. ಆನೆಗೊಂದಿ ಸಂಸ್ಥಾನದ ಈಚಿನ ರಾಜರುಗಳಲ್ಲೊಬ್ಬ ವೇಶ್ಯಪ್ರಿಯನಾಗಿದ್ದು ಅವರೊಂದಿಗೆ ಅಲ್ಲಿ ವಾಸವಾಗಿದ್ದನು. ಈ ಸ್ಥಳವನ್ನು ಬಿಟ್ಟು ಹೋಗು ಎಂದು ಎಷ್ಟೋ ಕನಸುಗಳು ಬಿದ್ದರೂ ಅವನು ಆ ಕನಸುಗಳನ್ನು ಲಕ್ಷ್ಯಮಾಡದೆ ಅಲ್ಲಿಯೇ ಇದ್ದುಬಿಟ್ಟನಂತೆ. ಒಂದು ದಿನ ತುಂಗಭದ್ರಾ ನದಿ ತುಂಬಿ ಹರಿಯುವಾಗ ರಾಜನು ತನ್ನ ಪ್ರಿಯತಮೆಯರೊಂದಿಗೆ ಆನೆಗೊಂದಿಗೆ ಹೋಗುವಾಗ ಹರಿಗೋಲು ಮುಳಿಗಿ, ಹರಿಗೋಲಿನಲ್ಲಿ ಇದ್ದವರೆಲ್ಲರೂ ಜಲ ಸಮಾದಿಯಾದರಂತೆ.[4] ಪವಿತ್ರ ಸ್ಥಳವನ್ನು ಮೋಜಿನ ತಾಣವಾಗಿ ಪರಿವರ್ತಿಸಿಕೊಂಡವರಿಗೆ ಒದಗಿದ ದುರಂತ ಕಥೆ.

**ಹೇರೂರು ಗ್ರಾಮದ ಅಂಬಿಗರ ವೀರಗಲ್ಲು:**

ಗಂಗಾವತಿ ತಾಲೂಕಿನ ಹೇರೂರು ಗ್ರಾಮದ ಬಸ್ ನಿಲ್ದಾಣದ ದಕ್ಷಿಣ ಭಾಗದಲ್ಲಿರುವ ಹೊಟೆಲ್ ಪಕ್ಕದಲ್ಲಿರುವ ಬೇವಿನ ಮರಕ್ಕೆ ಪೂರ್ವಾಭಿಮುಖವಾಗಿ ನಿಲ್ಲಿಸಿರುವ ಒಂದು ವೀರಗಲ್ಲು ಕಂಡುಬರುತ್ತದೆ. ಈ ವೀರಗಲ್ಲಿನಲ್ಲಿರುವ ವೀರನು ತನ್ನ ಬಲಗೈಯಲ್ಲಿ ಕತ್ತಿಯನ್ನು ಎಡಗೈಯಲ್ಲಿ ಹುಟ್ಟನ್ನು ಮೇಲ್ಮುಖವಾಗಿ ಎತ್ತಿ ಹಿಡಿದಿದ್ದಾನೆ. ತನ್ನ ಎಡಗಾಲನ್ನು ಒಂದು ಹೆಜ್ಜೆ ಮುಂದಿಟ್ಟು ಬಲಗಾಲನ್ನು ಸ್ವಲ್ಪ ಬಾಗಿದ ರೀತಿಯಲ್ಲಿ, ವೀರನು ಸಾಧಾರಣವಾದ ಉಡುಗೆಯಾದ ಮೈಯಂಗಿ ಮತ್ತು ಪಂಚೆಯನ್ನು ಧರಿಸಿದ್ದು, ಸಾಮಾನ್ಯ ಜನರು ಧರಿಸುವಂತಹ ಉಡುಗೆಗಳನ್ನು ಧ–

ರಿಸಿದ್ದಾನೆ. (ಚಿತ್ರ ಮೂರು) ಈ ಶಿಲ್ಪದ ಐತಿಹ್ಯ ಈ ರೀತಿ ಇದೆ. ಅಂಬಿಗನಾದ ಈ ವೀರನು ದೋಣಿ ನಡೆಸುವ ಮತ್ತು ಮೀನು ಹಿಡಿಯುವ ಕಾಯಕ ಮಾಡುತ್ತಿದ್ದ. ಒಂದು ದಿನ ಕೆರೆಯಲ್ಲಿ ಈಜಾಡುತ್ತಿದ್ದ ಒಬ್ಬ ಬಾಲಕನ ಕಾಲನ್ನು ಮೊಸಳೆಯೊಂದು ಹಿಡಿದಿತ್ತು. ಈ ವೀರ ಬಾಲಕನನ್ನು ಮೊಸಳೆಯಿಂದ ರಕ್ಷಿಸಿ ಬಾಲಕನ ಪ್ರಾಣ ಉಳಿಸಿ ತನ್ನ ಪ್ರಾಣವನ್ನು ಕಳೆದುಕೊಂಡನು. ಈ ಘಟನೆಯ ಸ್ಮರಣಾರ್ಥವಾಗಿ ಈ ವೀರಗಲ್ಲು ಹಾಕಲಾಗಿದೆ. ಕಲ್ಲಿನ ವಿಧ ಹಾಗೂ ಲಕ್ಷಣಗಳನ್ನಾಧರಿಸಿ ಇದು ವಿಜಯನಗರ ಕಾಲಕ್ಕೆ ಸೇರಿಸಬಹುದು.[5]

ಅಂಬಿಗರ ಮೂಲ ವೃತ್ತಿ ನದಿಯಲ್ಲಿ ಒಂದು ದಡದಿಂದ ಮತ್ತೊಂದು ದಡಕ್ಕೆ ಜನರನ್ನು ಮತ್ತು ಸರಕು ಸಾಮಾನುಗಳನ್ನು ಹರಿಗೋಲುಗಳ ನೆರವಿನಿಂದ ನದಿ ದಾಟಿಸುವುದು ಇವರ ಮೂಲ ವೃತ್ತಿ. ಪ್ರಾಚೀನಕಾಲದಿಂದಲೂ ತಮ್ಮ ವೃತ್ತಿಯನ್ನು ಮುಂದುವರಿಸಿಕೊಂಡು ಬಂದಿದ್ದಾರೆ. ಇವರು ಉತ್ತಮ ಈಜುಗಾರರಾಗಿದ್ದು, ಪ್ರತಿದಿನ ನೀರಿನೊಂದಿಗೆ ತಮ್ಮ ಬದುಕನ್ನು ಸವೆಸುವರು. ಇವರನ್ನು ಜಲವೀರರು ಎಂದೂ ಕರೆಯುವರು. ಇವರು ಹೆಚ್ಚಾಗಿ ನದಿ ತೀರ ಪ್ರದೇಶಗಳಲ್ಲೇ ನೆಲೆಸಿರುವರು. ಜಲವೀರರ ಕುರಿತ ವೀರಗಲ್ಲುಗಳು ತುಂಬಾ ವಿರಳ. ತುಂಗಭದ್ರಾ ನದಿ ತೀರದಲ್ಲಿ ಮೂರು ವೀರಗಲ್ಲುಗಳು ಕಂಡುಬಂದಿವೆ. ಆ ವೀರರು ತುಂಗಭದ್ರಾ ನದಿಯಲ್ಲಿ ಮುಳುಗುತ್ತಿದ್ದ ವಿಜಯನಗರದ ಪ್ರಭುತ್ವ ಪರಿವಾರವನ್ನು ತೆಪ್ಪದಿಂದ ಕಾಪಾಡಿ ವೀರಮರಣ ಹೊಂದಿದ ಜಲವೀರರು. ಹೇರೂರಿನಲ್ಲಿ ಮೊಸಳೆ ಬಾಯಿಯಿಂದ ಬಾಲಕನ್ನು ರಕ್ಷಿಸಿದ ವೀರನ ವೀರಗಲ್ಲು. ನೀರಿನಲ್ಲಿ ದುರಂತ ಸಂಭವಿಸಿದಾಗ ರಕ್ಷಣೆಗೆ ಹೋದ ಎಷ್ಟೋ ಜನರು ಸಾವನ್ನಪ್ಪಿರುವ ನಿದರ್ಶನಗಳು ನಮ್ಮ ಕಣ್ಣಮುಂದಿವೆ. ಇವರ ಜ್ಞಾಪಕಾರ್ಥವಾಗಿ ವೀರಗಲ್ಲುಗಳನ್ನು ಹಾಕಲಾಗಿದೆ. ಈ ವೀರಗಲ್ಲುಗಳು ಅಂದಿನ ಸಮಕಾಲಿನ ಸಂದರ್ಭದಲ್ಲಿ ಅಂಬಿಗರ ವೇಷ ಭೂಷಣಗಳನ್ನು, ಉಡುಗೆ ತೊಡುಗೆಗಳ ಬಗ್ಗೆ ಮಾಹಿತಿಯನ್ನು ಒದಗಿಸುತ್ತವೆ. ವೀರರು ತಮ್ಮ ಕೈಯಲ್ಲಿ ಹರಿಗೋಲಿನ ಹುಟ್ಟು ಹಿಡಿದಿರುವುದರಿಂದ ಇವು ಜಲವೀರರ ಅಥವಾ ಅಂಬಿಗರ ವೀರಗಲ್ಲುಗಳೆಂಬ ಖಚಿತ ಮಾಹಿತಿಯನ್ನು ಒದಗಿಸುತ್ತವೆ. ಇಂತಹ ವೀರಗಲ್ಲುಗಳು ಅಪರೂಪ ಇವು ರಕ್ಷಣೆಯಿಲ್ಲದೆ ಹಾಳಾಗುತ್ತಿವೆ. ಇವುಗಳ ಸಂರಕ್ಷಣೆ ಮಾಡಬೇಕಾಗಿದೆ ಮತ್ತು ಈ ನೆಲದ ಇಂತಹ ವೀರರ ಚರಿತ್ರೆಯನ್ನು ಅನಾವರಣ ಮಾಡಬೇಕಾಗಿದೆ.

ಚಿತ್ರ ಒಂದು



ಆನೆಗೊಂದಿ ಕೋಟೆಯ ದಕ್ಷಿಣ ಹೆಬ್ಬಾಗಿಲಿನರುವ ಅಂಬಿಗರ ವೀರಗಲ್ಲು

ಚಿತ್ರ ಎರಡು



ಆನೆಗೊಂದಿ ಹುಚ್ಚಪ್ಪಯ್ಯನ ಮಠದಲ್ಲಿರುವ ಅಂಬಿಗರ ವೀರಗಲ್ಲು

ಚಿತ್ರ ಮೂರು



ಹೇರೂರು ಗ್ರಾಮದ ಅಂಬಿಗರ ವೀರಗಲ್ಲು

**ಕೊನೆ ಟಿಪ್ಪಣಿಗಳು:**

1. ಶೇಷಶಾಸ್ತ್ರೀ ಆರ್. (2004), ಕರ್ನಾಟಕದ ವೀರಗಲ್ಲುಗಳು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು. ಪುಟ–25.
2. ಅದೇ, ಪುಟ–168.
3. ದೇವರಕೊಂಡಾರೆಡ್ಡಿ (2006), ಹಂಪಿ ಸಂಪುಟ ಕಲೆ, ಕ್ರೀಡೆ ಮತ್ತು ಕೌಶಲ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ. ಪುಟ–387.
4. ಲಕ್ಷ್ಮಣ್ ತೆಲಗಾವಿ (2017), ಹಂಪಿ ವಿಜಯನಗರ ಕೆಲವು ಬರಹಗಳು, ವಾಲ್ಮೀಕಿ ಸಾಹಿತ್ಯ ಸಂಪದ, ಹರ್ತಿಕೋಟೆ. ಪುಟ–155.
5. ಗೀತಾ ಪಾಟೀಲ (2021), ಕೊಪ್ಪಳ ಜಿಲ್ಲೆಯ ವಾಸ್ತು–ಶಿಲ್ಪ–ಸಂಸ್ಕೃತಿ, ತಿಳಿವು ಪ್ರಕಾಶನ, ವಳವಂಡಿವಾಡ. ಪುಟ–76.